ಗುಣವಿದೆ. ಇವುಗಳು ಕೇವಲ ಒಂದು ಜನಾಂಗಕ್ಕೆ ಸೀಮಿತಗೊಳ್ಳದೇ ಸ್ಥಳೀಯ ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಆಯಾಮವನ್ನು ಪಡೆದು ವಿಶ್ವಾತ್ಮಕಗೊಳ್ಳುತ್ತವೆ.

**ಕಾಣಿರೋ ಕಾಣಿರೋ ಕಾಣಿರೋ**
**ಕಣ್ಣಿದ್ದವರು ಕಾಣಿರೋ**
**ಕಣ್ಣಿಲ್ಲದವರು ಕಣ್ಣು ಧರಿಸಿ ಕಾಣಿರೋ (ಗಲ್ಲೆಬಾನಿ)**

ಕೇಬಿ ಕಾವ್ಯದ ಅನುಸಂಧಾನಕ್ಕೆ ಹೊಸ ದೃಷ್ಟಿಕೋನವೊಂದರ ಅಗತ್ಯವನ್ನು ಈ ಸಾಲುಗಳು ಮುಂದಿಡುತ್ತಿವೆ. ಏಕೆಂದರೆ ಇಂಥ ಕಾವ್ಯದ ಕವಿ ಒಬ್ಬನಾದರೂ ಅದು ಸಮುದಾಯ ಕಥನವಾಗಿರುತ್ತದೆ. ಪ್ರಸ್ತುತ ದಲಿತ ಮಾದರಿಗಳನ್ನು ಪುನರ್ ವಿಮರ್ಶೆಗೆ ಒಳಪಡಿಸುವ, ಅಭಿವ್ಯಕ್ತಿ ಮಾಧ್ಯಮಗಳನ್ನು ನೋಡುವ ಕ್ರಮವನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಸಾಮಾಜಿಕ ವ್ಯವಸ್ಥೆ ಸಿಲುಕಿದೆ. ಈ ಎಲ್ಲದಕ್ಕೂ ಅನುಭಾವವೇ ಪರಿಹಾರ ಒದಗಿಸಲಾರದು. ಈ ಸಂಕಟಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ ಆಯಾಮಗಳು ಯಥಾಶಕ್ತಿ ಕಾರಣವಾಗಿವೆ. ಹಾಗಾಗಿ ದಲಿತ ಕಾವ್ಯಕ್ಕೆ ಬಹುಶಿಸ್ತೀಯ ಮಾದರಿಗಳ ಅನುಸಂಧಾನದ ಅಗತ್ಯವಿದೆ. ಕಾವ್ಯ ಮತ್ತು ಅದನ್ನು ಓದುವ ವಿಶಿಷ್ಟ ಮಾದರಿಗಳೆರಡನ್ನೂ ತಮ್ಮ ಕಾವ್ಯದಲ್ಲಿ ಕೆ.ಬಿ. ಸಿದ್ಧಯ್ಯನವರು ಮುಂದಿಟ್ಟಿದ್ದಾರೆ.

ಕೆ.ಬಿ. ಸಿದ್ಧಯ್ಯನವರ ಕಾವ್ಯ ಪ್ರಯಾಣದಲ್ಲಿ ಕೆಲವು ಘಟ್ಟಗಳನ್ನು ಗುರುತಿಸಬಹುದು. ಆರಂಭದ 'ಬಕಾಲ' ಲೋಕಸೃಷ್ಟಿಪುರಾಣಗಳನ್ನು ಧ್ಯಾನಿಸಿದರೆ 'ಗಲ್ಲೇಬಾನಿ'ಯ ಹೊತ್ತಿಗೆ ಸಾವನ್ನು ಧ್ಯಾನಿಸುತ್ತದೆ. ಹುಟ್ಟಿನಿಂದ ಸಾವಿನವರೆಗೆ ಕಾಡುವ ಅಸ್ಪೃಶ್ಯತೆಯ ಅನುಭವಗಳು ಮಾತ್ರ ಸ್ಥಾಯಿಯಾಗಿವೆ. 'ಬಕಾಲ' ಆದಿಜಾಂಬವನ ಮೂಲಕ ಲೋಕಸೃಷ್ಟಿಯನ್ನು ನಡೆಸುತ್ತಿದ್ದರೆ, 'ಗಲ್ಲೆಬಾನಿ'ಯಲ್ಲಿ ವಿಸರ್ಜನೆಯ ದಾರಿಯಾಗಿ ಸಾವನ್ನು ಆಧ್ಯಾತ್ಮೀಕರಿಸುವ ಹೊಸದಾರಿಯನ್ನು ಅನ್ವೇಷಿಸತೊಡಗಿದ್ದರು. ಸಾವನ್ನು ಮುಟ್ಟಬಾರದ ಬದುಕಿನ ಬಿಡುಗಡೆಯ ರೂಪವಾಗಿ ಧ್ಯಾನಿಸಿದ್ದರು. ಸಾವನ್ನು ಕೇಡೆಂದು ಬಗೆಯದೆ ಸೃಜನಶೀಲತೆಯ ರೂಪವನ್ನಾಗಿ ಕಂಡುಕೊಂಡಿದ್ದರು. ಇದು ಕಾವ್ಯದಲ್ಲಷ್ಟೇ ಆಗಿರಲಿಲ್ಲ. ಒಂದು ತಿಂಗಳ ಹಿಂದೆ ಹತ್ತಾರು ಬಾರಿ ಆತ್ಮೀಯರನ್ನು ತಮ್ಮ ಕೆಂಕೆರೆ ತೋಟಕ್ಕೆ ಕರೆದೊಯ್ದು 'ನನ್ನನ್ನು ಈ ಅಂಕಾಲೆ ಮರ ಆಲ್ದಮರದ ನಡುವೇನೆ ಊಳ್ರೋ' ಎಂದು ಅವೆರಡರ ನಡುವೆ ಮಲಗಿ ತೋರಿಸಿದ್ದರಂತೆ. ಈಗ ಶಾಂತವಾಗಿ ಆ ಮರಗಳ ನಡುವೆಯೇ ಮಲಗಿ 'ಕಾಣಿರೋ ಕಾಣಿರೋ...' ಎಂದು ಕೈ ತೋರುತ್ತ ಮುಗಿತಾಯವಿಲ್ಲದ ಧ್ಯಾನದಲ್ಲಿ ಲೀನರಾಗಿದ್ದಾರೆ.

## ನೀ.ಹ. ರವಿಕುಮಾರ

ಕನ್ನಡದ ವಿಮರ್ಶಾಲೋಕದಲ್ಲಿ ಹೊಸ ಹೆಜ್ಜೆ – ಹೊಳಹುಗಳಿಂದ ಗಮನಸೆಳೆದಿರುವ ರವಿಕುಮಾರ್ ಅವರು ಹಳ್ಳಿಗಾಡಿನ ಪ್ರತಿಭೆ. ಬೆಂಗಳೂರು ವಿವಿಯಲ್ಲಿ ಕನ್ನಡ ಎಂ.ಎ. ಪದವಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ' ಎಂಬ ವಿಷಯ ಕುರಿತ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿದ್ದಾರೆ. ಸಂಶೋಧನೆ, ಖಂಡಕಾವ್ಯಗಳೆಡೆಗೂ ಹೊರಳಿದವರು. ಕನ್ನಡ ಅಧ್ಯಾಪಕರು. 'ಸೂಲು', 'ಪುಸ್ತಕ ವಿಮರ್ಶಾ ಕಥನಗಳು', 'ಕಂಡದಾರಿ', 'ಧರ್ಮರಾಜಕಾರಣ' ಮುಂತಾದ ಕೃತಿಗಳು ಪ್ರಕಟಗೊಂಡಿವೆ.